ಪ್ರತಿಬಿಂಬ
PRATIBIMBA –Multidisciplinary Kannada Research Journal of IIMRD
ISSN: 2582-2284
Vol-7 Issue-5, March - April 2026, Pp. 90-94
©*IIMRD*, Mysuru
www.iimrd.com

# ಗ್ರಾಮ ನೈರ್ಮಲ್ಯ

**ಡಾ.ವಿ.ಶ್ರೀನಿವಾಸ್**
ಅಥಿತಿ ಉಪನ್ಯಾಸಕರು, ಗ್ರಾಮೀಣ ಅಭಿವೃದ್ಧಿ ಕೇಂದ್ರ, ಬೆಂಗಳೂರು ವಿಶ್ವವಿದ್ಯಾಲಯ, ಜ್ಞಾನಭಾರತಿ ಆವರಣ, ಬೆಂಗಳೂರು

**ಸಾರಾಂಶ: (Abstract)**

*ನೈರ್ಮಲ್ಯವು ಶುದ್ಧ ಕುಡಿಯುವ ನೀರು, ಸ್ವಚ್ಛತೆ, ಮಾನವನ ಮಲವಿಸರ್ಜನೆ ಮತ್ತು ಕೊಳವೆ ನೀರಿನ ಪರಿಷ್ಕರಣೆ ಹಾಗೂ ವಿಲೇವಾರಿಗೆ ಸಂಬಂಧಿಸಿದ ಸಾರ್ವಜನಿಕ ಆರೋಗ್ಯ ಪರಿಸ್ಥಿತಿಗಳನ್ನು ಸೂಚಿಸುತ್ತದೆ. ನೈರ್ಮಲ್ಯ ವ್ಯವಸ್ಥೆಗಳು ಸ್ವಚ್ಛ ಪರಿಸರವನ್ನು ಒದಗಿಸುವ ಮೂಲಕ ಮಾನವನ ಆರೋಗ್ಯವನ್ನು ರಕ್ಷಿಸುವ ಗುರಿಯನ್ನು ಹೊಂದಿವೆ. ನೀರು ಮತ್ತು ನೈರ್ಮಲ್ಯದ ಮಾನವ ಹಕ್ಕು 2010ರಲ್ಲಿ ವಿಶ್ವಸಂಸ್ಥೆಯ ಜನರಲ್ ಅಸೆಂಬ್ಲಿಯಿಂದ ಗುರುತಿಸಲ್ಪಟ್ಟಿದೆ ನೈರ್ಮಲ್ಯವು ಜಾಗತಿಕ ಅಭಿವೃದ್ಧಿಯ ಆದ್ಯತೆಯಾಗಿದೆ ಮತ್ತು ಸುಸ್ಥಿರ ಅಭಿವೃದ್ಧಿಯ ವಿಷಯವಾಗಿದೆ. ಈ ಹಿನ್ನೆಲೆಯಲ್ಲಿ ಪ್ರಸ್ತುತ ಲೇಖನದಲ್ಲಿ ಗ್ರಾಮ ನೈರ್ಮಲ್ಯ ಕುರಿತು ಚರ್ಚಿಸಲಾಗಿದೆ.*

**ಮುಖ್ಯಪದಗಳು (Keywords):** *ಗ್ರಾಮೀಣ ಪ್ರದೇಶ, ಗ್ರಾಮ ಪಂಚಾಯತ್, ಗ್ರಾಮ ನೈರ್ಮಲ್ಯ, ಪರಿಸರ*

## ಪೀಠಿಕೆ

ಬುದ್ಧಿಶಕ್ತಿ ಮತ್ತು ಶ್ರಮದ ನಡುವೆ ವಿಚ್ಛೇದ ಉಂಟಾಗಿದ್ದರ ಪರಿಣಾಮವಾಗಿ ಹಳ್ಳಿಗಳು ದಂಡನೆಗೆ ಅರ್ಹವಾಗಿರುವ ನಿರ್ಲಕ್ಷ್ಯಕ್ಕೆ ಗುರಿಯಾಗಿವೆ ಅದೇ ರೀತಿಯಲ್ಲಿ ಭೂಮಿಯ ಮೇಲೆ ಚುಕ್ಕೆಗಳನ್ನಿಟ್ಟಂತೆ ಇರುವ ಆಕರ್ಷಕವಾದ ಸಣ್ಣ ಹಳ್ಳಿಗಳಿಗೆ ಪ್ರತಿಯಾಗಿ ನಾವು ತೊಪ್ಪೆ ರಾಶಿಗಳನ್ನು ಹೊಂದಿದ್ದೇವೆ. ಅನೇಕ ಹಳ್ಳಿಗಳನ್ನು ಸಮೀಪಿಸಿದಾಗ ತಾಜಾ ಅನುಭವ ಉಂಟಾಗುವುದಿಲ್ಲ. ಆಗಾಗ್ಗೆ ಒಬ್ಬಾತನಿಗೆ ಅವನ ಕಣ್ಣುಗಳನ್ನು ಮುಚ್ಚಿಕೊಳ್ಳುವಂತಾಗುವುದು. ಮತ್ತು ಮೂಗನ್ನು ಅದುಮಿಕೊಳ್ಳುವಂತಾಗುವುದು. ಪರಿಸರದಲ್ಲಿ ಅಂತಹ ಕೊಳೆ ಮತ್ತು ಜಿಗುಪ್ಸೆಯನ್ನುಂಟುಮಾಡುವ ವಾಸನೆ ತುಂಬಿಕೊಂಡಿರುವುದು, ರಾಷ್ಟ್ರೀಯ ಕಾಂಗ್ರೆಸ್, ಕಾರ್ಯಕರ್ತರಲ್ಲಿ ಬಹುಪಾಲು ಮಂದಿ ನಮ್ಮ ಹಳ್ಳಿಗಳಲ್ಲಿ ಜನಿಸಿರುವುದರಿಂದ ಅವರು ನಿರ್ಮಲತೆ ಎಂಬ ಶಬ್ದದ ಪ್ರತಿಯೊಂದು ಇಂಗಿತದಲ್ಲೂ ನಿರ್ಮಲತೆಯ ಮಾದರಿಗಳಾಗುವಂತೆ ನಮ್ಮ ಹಳ್ಳಿಗಳನ್ನು ರೂಪಿಸಲು ಅವರು ಸಮರ್ಥರಾಗಬೇಕು. ಆದರೆ ಅವರು ಗ್ರಾಮವಾಸಿಗಳಾಗಿರುವುದರಿಂದ ತಮ್ಮ ದಿನನಿತ್ಯದ ಬದುಕಿನಲ್ಲಿ ತಮ್ಮನ್ನು ತಾವು ಗ್ರಾಮವಾಸಿಗಳು ಎಂದು ಗುರುತಿಸಿಕೊಳ್ಳುವುದು ತಮ್ಮ ಕರ್ತವ್ಯ ಎಂದು ಅವರು ಪರಿಗಣಿಸಿಲ್ಲ. ರಾಷ್ಟ್ರೀಯ ಅಥವಾ ಸಾಮಾಜಿಕ ನೈರ್ಮಲ್ಯದ ಪ್ರಜ್ಞೆ ನಮ್ಮಲ್ಲಿ

*Please cite this article as: ಶ್ರೀನಿವಾಸ್, ವಿ.* (2026). ಗ್ರಾಮ ನೈರ್ಮಲ್ಯ. ಪ್ರತಿಬಿಂಬ: *ಮಲ್ಟಿಡಿಸಿಪ್ಲಿನರಿ ಕನ್ನಡ ರೀಸರ್ಚ್ ಜರ್ನಲ್ ಆಫ್ ಐಐಎಂಆರ್‌ಡಿ, 7(5). ಪು.ಸಂ.* 90–94

ಒಂದು ಸದ್ಗುಣವಾಗಿ ಉಳಿದುಕೊಂಡಿಲ್ಲ. ನಾವು ಒಂದು ಬಗೆಯಲ್ಲಿ ಸ್ನಾನ ಮಾಡುತ್ತೇವೆ, ಆದರೆ ನಾವು ಪಕ್ಕದಲ್ಲಿರುವ ಯಾವುದೇ ನದಿ, ಕೆರೆ ಅಥವಾ ಬಾವಿಯನ್ನು ಮಲಿನಗೊಳಿಸುತ್ತಿರುವುದರ ಬಗ್ಗೆ ತಲೆ ಕೆಡಿಸಿಕೊಳ್ಳುವುದಿಲ್ಲ. ನಾವು ಅವುಗಳಲ್ಲಿ ಶಾಸ್ತ್ರೋಕ್ತ ಸ್ನಾನ ಮಾಡಿದರೂ ನಾವು ಅವನ್ನು ಕಲುಷಿತಗೊಳಿಸುತ್ತಿರುತ್ತೇವೆ. ನಾನು ಈ ದೋಷವನ್ನು ಭಾರಿ ಹೀನಕಾರ ಎಂದು ಭಾವಿಸುತ್ತೇನೆ. ಇದು ನಮ್ಮ ಹಳ್ಳಿಗಳ ಮತ್ತು ಪವಿತ್ರ ನದಿಗಳ ದಡಗಳ ಹೀನಾಯ ಸ್ಥಿತಿಗೆ ಕಾರಣವಾಗಿದೆ ಮತ್ತು ಅನೈರ್ಮಲ್ಯದಿಂದ ಪುಟಿದೇಳುವ ಕಾಯಿಲೆಗಳ ಹೊಣೆಯನ್ನು ಹೊತ್ತುಕೊಂಡಿವೆ.

ಹಳ್ಳಿಗಳಲ್ಲಿ ನಿರ್ವಹಿಸಬೇಕಾಗಿರುವ ಕಾರ್ಯಗಳಲ್ಲಿ ಕೆರೆಗಳನ್ನು ಮತ್ತು ಬಾವಿಗಳನ್ನು ಚೊಕ್ಕಟಗೊಳಿಸುವುದು ಮತ್ತು ಲದ್ದಿರಾಶಿಗಳನ್ನು ತೊಡೆದುಹಾಕುವ ಮೂಲಕ ಅವನ್ನು ಶುಚಿಯಾಗಿಟ್ಟುಕೊಳ್ಳುವುದು ಸೇರಿರುತ್ತವೆ. ಕಾರ್ಯಕರ್ತರು ತಾವಾಗಿ ಕೆಲಸವನ್ನು ಆರಂಭಿಸಬೇಕು. ವೇತನ ಪಡೆದು ಕೆಲಸ ಮಾಡುವ ಭಂಗಿಗಳಂತೆ ದಿನನಿತ್ಯ ಕೆಲಸ ಮಾಡಲಾರಂಭಿಸಿದರೆ ಮತ್ತು ಗ್ರಾಮವಾಸಿಗಳಿಗೆ ತಾವು ಅವರೊಂದಿಗೆ ಸೇರಿಕೊಳ್ಳಬೇಕೆನ್ನಿಸಿದರೆ ಮತ್ತು ಅಂತಿಮವಾಗಿ ಇಡೀ ಕೆಲಸವನ್ನು ತಾವೇ ಮಾಡಬೇಕೆನ್ನಿಸಿದರೆ ಗ್ರಾಮವಾಸಿಗಳು ಶೀಘ್ರವಾಗಿ ಇಲ್ಲವೇ ತಡವಾಗಿಯಾದರೂ ಸಹಕರಿಸುತ್ತಾರೆ ಎಂಬುದನ್ನು ಈ ಕಾರ್ಯಕರ್ತರು ಖಾತ್ರಿಯಾಗಿ ಅರಿತುಕೊಳ್ಳುವರು ಓಣಿಗಳಲ್ಲಿ ಮತ್ತು ಬೀದಿಗಳಲ್ಲಿ ಕಸಕಡ್ಡಿಗಳನ್ನು ತೊಡೆದುಹಾಕುವ ಮೂಲಕ ಅವನ್ನು ಚೊಕ್ಕಟಗೊಳಿಸಬೇಕು. ಈ ಕಸಕಡ್ಡಿಗಳನ್ನು ವಿಂಗಡಿಸಬೇಕು. ಅವುಗಳಲ್ಲಿ ಗೊಬ್ಬರವಾಗಿ ಪರಿವರ್ತಿಸಬಹುದಾದ, ಮತ್ತು ಸುಮ್ಮನೇ ಹೊತ್ತು ಹಾಕಬಹುದಾದ ಮತ್ತು ನೇರವಾಗಿ ಸಂಪತ್ತಿನ ರೂಪದಲ್ಲಿ ಪರಿವರ್ತಿಸಬಹುದಾದ ಭಾಗಗಳು ಇರುತ್ತವೆ. ಎತ್ತಿಕೊಂಡಿರುವ ಪ್ರತಿಯೊಂದು ಎಲುಬಿನ ಚೂರು ಕಚ್ಚಾ ಸಾಮಗ್ರಿಯಾಗಿದ್ದು ಅವುಗಳಿಂದ ಉಪಯುಕ್ತ ವಸ್ತುಗಳನ್ನು ತಯಾರಿಸಬಹುದು. ಅಥವಾ ಅವನ್ನು ಪುಡಿಮಾಡಿ ಸಂಪದ್ಭರಿತ ಗೊಬ್ಬರವಾಗಿ ಪರಿವರ್ತಿಸಬಹುದು. ಚಿಂದಿರಾಶಿ ಮತ್ತು ತ್ಯಾಜ್ಯ ಕಾಗದವನ್ನು ಕಾಗದವಾಗಿ ಪರಿವರ್ತಿಸಬಹುದು ಮತ್ತು ಎತ್ತಿಕೊಂಡಿರುವ ಮಲಮೂತ್ರಾದಿಗಳು ಹಳ್ಳಿಯ ಜಮೀನುಗಳಿಗೆ ಬೆಲೆಯುಳ್ಳ ಗೊಬ್ಬರವಾಗುವುದು.

ಮಲಮೂತ್ರಾದಿಗಳನ್ನು ಸಂಸ್ಕರಿಸುವ ವಿಧಾನದಲ್ಲಿ ಘನರೂಪ ಇಲ್ಲವೇ ದ್ರವರೂಪದಲ್ಲಿರುವುದನ್ನು ಮಿಶ್ರಮಾಡಬೇಕು ಮತ್ತು ಬಹುತೇಕ ಒಂದು ಅಡಿಗಿಂತಲೂ ಹೆಚ್ಚು ಆಳವಾಗದಂತೆ ಮಣ್ಣಿನಲ್ಲಿ ಗುಂಡಿ ತೋಡಿ ಹೊರ ಮೈಯಲ್ಲಿರುವ ಮಣ್ಣಿನೊಂದಿಗೆ ಅದರಲ್ಲಿ ಮಿಶ್ರಣಮಾಡಬೇಕು. ಹಳ್ಳಿಗಾಡಿನ ಆರೋಗ್ಯ ಕುರಿತ ಪುಸ್ತಕದಲ್ಲಿ ಡಾ. ಪೂರೆ ಒಂಭತ್ತರಿಂದ ಹನ್ನೆರಡು ಇಂಚುಗಳಿಗಿಂತಲೂ ಆಳವಾಗಿರದ ಮಣ್ಣಿನಲ್ಲಿ ಮಲಮೂತ್ರಾದಿಗಳನ್ನು ಹೂಳಬೇಕು ಎಂದು ಹೇಳುತ್ತಾರೆ. (ನಾನು ಸ್ಮರಿಸಿಕೊಂಡು ಇದನ್ನು ಉಲ್ಲೇಖಿಸುತ್ತಿದ್ದೇನೆ) ಹೊರಮೈಯಲ್ಲಿರುವ ಮಣ್ಣಿನಲ್ಲಿ ಅತಿಸೂಕ್ಷ್ಮ ಜೀವಿಗಳು ತುಂಬಿಕೊಂಡಿದ್ದು ಅವು ಬೆಳಕು ಹಾಗೂ ಗಾಳಿಯೊಂದಿಗೆ ಕೂಡಿಕೊಂಡು ಸುಲಭವಾಗಿ ಒಳಕ್ಕೆ ಪ್ರವೇಶಿಸಿ ಮಲ ಮೂತ್ರಾದಿಗಳನ್ನು ಮೆದುವಾದ ಮತ್ತು ಸುವಾಸನೆ ಬೀರುವ ಮಣ್ಣಿನರೂಪದಲ್ಲಿ ಒಂದು ವಾರದಲ್ಲಿ ಪರಿವರ್ತಿಸುವವು ಎಂದು ಡಾ.ಪೂರೆ ಎಂಬ ಲೇಖಕರು ತಿಳಿಸಿದ್ದಾರೆ. ಯಾವನೇ ಗ್ರಾಮವಾಸಿ ಇದನ್ನು ಸ್ವತಃ ಪರೀಕ್ಷಿಸಿ ನೋಡಬಹುದು. ಈ ರೀತಿಯಲ್ಲಿ ಕಾವ್ಯವನ್ನು ಕೈಗೊಳ್ಳಬೇಕಾಗಿದ್ದರೆ ಮಣ್ಣಿನ ಅಥವಾ ಕಬ್ಬಿಣದ

ಬಕೆಟ್ಟುಗಳಿರುವ ಸ್ಥಿರವಾದ ಕಕ್ಕಸುಗಳು ಇರಬೇಕು ಮತ್ತು ಸರಿಯಾಗಿ ಸಿದ್ಧಪಡಿಸಲಾಗಿರುವ ಸ್ಥಳಗಳಲ್ಲಿ ದಿನನಿತ್ಯವೂ ತುಂಬಿರುವುದನ್ನು ಖಾಲಿಮಾಡುವಂತಿರಬೇಕು. ಅಥವಾ ಚೌಕಾಕಾರದಲ್ಲಿ ನೆಲದಲ್ಲಿ ತೋಡಿರುವ ಜಾಗದಲ್ಲಿ ನೇರವಾಗಿ ಕಾರ್ಯವನ್ನು ನಿರ್ವಹಿಸುವಂತಿರಬೇಕು. ಮಲ ಮೂತ್ರಾದಿಗಳನ್ನು ಹಳ್ಳಿಯ ಸಾರ್ವಜನಿಕ ಜಮೀನಿನಲ್ಲಿ ಇಲ್ಲವೇ ವೈಯಕ್ತಿಕ ಜಮೀನುಗಳಲ್ಲಿ ಹೂಳಬಹುದು. ಈ ಕಾರ್ಯವನ್ನು ಗ್ರಾಮವಾಸಿಗಳ ಸಹಕಾರವಿದ್ದರೆ ಮಾತ್ರ ನಡೆಸಬಹುದು. ಅತ್ಯಂತ ಕೆಟ್ಟ ಪರಿಸ್ಥಿತಿಯಲ್ಲೂ ಉದ್ಯಮಶೀಲ ಗ್ರಾಮವಾಸಿಯೊಬ್ಬ ಮಲಮೂತ್ರಾದಿಗಳನ್ನು ಸಂಗ್ರಹಿಸಬಹುದು ಮತ್ತು ತಾನೇ ಸ್ವತಹ ಅದನ್ನು ಸಂಪತ್ತಾಗಿ ಪರಿವರ್ತಿಸಿಕೊಳ್ಳಬಹುದು. ಸದ್ಯ ಈ ಸಂಪದ್ಭರಿತ ಗೊಬ್ಬರವು ಲಕ್ಷಾಂತರ ರೂಪಾಯಿ ಬೆಲೆಯುಳ್ಳದ್ದಾಗಿದ್ದು ಪ್ರತಿದಿನ ಅದು ವ್ಯರ್ಥವಾಗುತ್ತಿದೆ. ಅದು ಗಾಳಿಯನ್ನು ಕಲುಷಿತಗೊಳಿಸುತ್ತಿರುವುದರ ಜತೆಯಲ್ಲಿ ಅಗ್ಗವಾಗಿ ಕಾಯಿಲೆಗಳನ್ನು ತರುತ್ತಿದೆ.

ಗ್ರಾಮದ ಕೆರೆ–ಕಟ್ಟೆಗಳು ಸ್ನಾನಕ್ಕೆ ಬಟ್ಟೆಗಳನ್ನು ಒಗೆಯುವುದಕ್ಕೆ ಕುಡಿಯುವುದಕ್ಕೆ ಮತ್ತು ಅಡಿಗೆ ಉದ್ದೇಶಗಳಿಗೆ ವಿವೇಚನೆಯಿಲ್ಲದೇ ಬಳಕೆಯಾಗುತ್ತಿವೆ. ಅನೇಕ ಗ್ರಾಮಗಳ ಕೆರೆಗಳನ್ನು ಜಾನುವಾರುಗಳು ಕೂಡ ಬಳಸಿಕೊಳ್ಳುತ್ತಿವೆ. ಆಗಾಗ್ಗೆ ಎಮ್ಮೆಗಳು ಇವುಗಳಲ್ಲಿ ಹೊರಳಾಡುತ್ತಿರುವುದನ್ನು ಕಾಣಬಹುದು. ಅಚ್ಚರಿಪಡುವ ಸಂಗತಿಯೆಂದರೆ ಈ ಬಗೆಯಲ್ಲಿ ಹಳ್ಳಿಗಳ ಕೆರೆಗಳನ್ನು ಪಾಪಪೂರಿತವಾಗಿ ದುರುಪಯೋಗಪಡಿಸಿಕೊಳ್ಳುತ್ತಿದ್ದರೂ ಗ್ರಾಮವಾಸಿಗಳು ಸಾಂಕ್ರಾಮಿಕ ರೋಗಗಳಿಗೆ ತುತ್ತಾಗಿ ಜೀವ ಕಳೆದುಕೊಳ್ಳುತ್ತಿಲ್ಲ. ಸರ್ವ ಸಾಮಾನ್ಯವಾಗಿ ವೈದ್ಯಕೀಯ ನಿದರ್ಶನದ ಪ್ರಕಾರ ಗ್ರಾಮಗಳಿಗೆ ಪರಿಶುದ್ಧ ನೀರನ್ನು ಸರಬರಾಜು ಮಾಡುವುದನ್ನು ಖಾತ್ರಿ ಪಡಿಸಿಕೊಳ್ಳುವಲ್ಲಿ ನಿರ್ಲಕ್ಷ್ಯ ತೋರಿಸಿದ್ದರಿಂದಾಗಿ ಗ್ರಾಮವಾಸಿಗಳು ಅನೇಕ ಕಾಯಿಲೆಗಳಿಗೆ ತುತ್ತಾಗಿ ಬಾಧೆಪಡುತ್ತಿದ್ದಾರೆ. ಆದ್ದರಿಂದ ಭಾರತದಲ್ಲಿ ಬಾಧೆಪಡುತ್ತಿರುವ ಮಾನವಕೋಟಿಗೆ ನಿರೀಕ್ಷಿಸಲಾಗದ ರೀತಿಯಲ್ಲಿ ಅಪರಿಮಿತ ಲಾಭಗಳನ್ನು ತಂದು ಕೊಡುವಂತಹ ಭವ್ಯ ಮತ್ತು ಆಸಕ್ತಿದಾಯಕ ಮತ್ತು ಬೋಧಪ್ರದ ಸೇವೆ (ಗ್ರಾಮ ನೈರ್ಮಲ್ಯ) ಇದಾಗಿದೆ ಎಂಬುದನ್ನು ಒಪ್ಪಿಕೊಳ್ಳಲಾಗುವುದು.

ಈ ಸಮಸ್ಯೆಯನ್ನು ಯಾವ ರೀತಿಯಲ್ಲಿ ನಿಭಾಯಿಸಬೇಕು ಎಂಬುದು ನನ್ನ ವಿವರಣೆಯಿಂದ ಸ್ಪಷ್ಟವಾಗಿದೆ ಎಂದು ನಾನು ಆಶಿಸುತ್ತೇನೆ. ಸ್ವಇಚ್ಛೆಯನ್ನಿಟ್ಟುಕೊಂಡು ಕೆಲಸಮಾಡುವ ಕಾರ್ಯಕರ್ತರು ಲೇಖನಿ ಮತ್ತು ಸೀಸದಕಡ್ಡಿಯಲ್ಲಿ ಹೆಮ್ಮೆಯನ್ನಿಟ್ಟುಕೊಂಡಂತೆ ಅದೇ ರೀತಿಯಲ್ಲಿ ನಿರಾತಂಕವಾಗಿ ಪೊರಕೆ ಮತ್ತು ಬಾಚುಸನಿಕೆಯನ್ನು ಹಿಡಿದುಕೊಂಡು ಬಳಸುವುದರಿಂದ ಖರ್ಚಿನ ಪ್ರಶ್ನೆ ಬಹುತೇಕ ಪೂರ್ತಿಯಾಗಿ ನಿವಾರಣೆಯಾಗುವುದು. ಅಗತ್ಯ ವಾಗಿರುವ ಎಲ್ಲ ವೆಚ್ಚ ಕೇವಲ ಒಂದು ಪೊರಕೆ, ಒಂದು ಬುಟ್ಟಿ, ಒಂದು ಬಾಚುಸನಿಕೆ ಮತ್ತು ಎಲೆಗುದ್ದಲಿ ಮತ್ತು ಪ್ರಾಯಶಃ ಕೆಲವು ಸೋಂಕು ನಿವಾರಕಗಳ ಮಿತಿಗೊಳಪಟ್ಟಿರುತ್ತದೆ. ಪ್ರಾಯಶಃ ಒಣಬೂದಿ ಯಾವನೇ ರಸಾಯನ ಶಾಸ್ತ್ರಜ್ಞ ಸರಬರಾಜುಮಾಡುವ ಕ್ರಿಮಿನಾಶಕಕ್ಕಿಂತಲೂ ಹೆಚ್ಚು ಪರಿಣಾಮಕಾರಿಯಾಗಿದೆ.

ಒಂದು ಆದರ್ಶ ಭಾರತೀಯ ಗ್ರಾಮವನ್ನು ಅದು ಸ್ವತಹ ಪರಿಪೂರ್ಣವಾಗಿರುವ ನೈರ್ಮಲ್ಯವನ್ನು ಒದಗಿಸುವ ರೀತಿಯಲ್ಲಿ ಕಟ್ಟಬೇಕು. ಅದು ಸಾಕಷ್ಟು ಬೆಳಕು ಮತ್ತು ಗಾಳಿ ಸಂಚರಿಸುತ್ತಿರುವ ಕುಟೀರಗಳನ್ನು

ಹೊಂದಿರುವುದು. ಈ ಕುಟೀರಗಳನ್ನು ಹಳ್ಳಿಯ ಐದು ಮೈಲಿಗಳ ಪರಿಧಿಯಲ್ಲಿ ದೊರೆಯುವ ಸಾಮಗ್ರಿಗಳನ್ನು ಬಳಸಿಕೊಂಡು ಕಟ್ಟಬೇಕು. ಈ ಕುಟಿರಗಳು ಮನೆಮಂದಿಗೆ ತಮ್ಮ ಮನೆಯ ಉಪಯೋಗಕ್ಕೆ ಅಗತ್ಯವಾಗಿರುವ ತರಕಾರಿಗಳನ್ನು ಬೆಳೆಯಲು ಮತ್ತು ಜಾನುವಾರುಗಳನ್ನು ಸಾಕಲು ಅಂಗಳಗಳನ್ನು ಹೊಂದಿರುವುವು. ಹಳ್ಳಿಯ ಓಣಿಗಳು ಮತ್ತು ಬೀದಿಗಳು ತಡೆಗಟ್ಟಬಹುದಾದ ಧೂಳಿನಿಂದ ಮುಕ್ತವಾಗಿರುವುವು. ಹಳ್ಳಿಯು ಆದರ ಆಗತ್ಯಗಳಿಗನುಸಾರವಾಗಿ ಮತ್ತು ಎಲ್ಲರಿಗೂ ಸುಲಭವಾಗಿ ನೀರು ಸೇದಿಕೊಳ್ಳಲು ಸಾಧ್ಯವಿರುವ ಬಾವಿಗಳನ್ನು ಹೊಂದಿರುವುದು, ಜತೆಯಲ್ಲಿ ಸಾರ್ವತ್ರಿಕ ಸಭಾ ಮಂದಿರ, ಎಲ್ಲರಿಗೂ ಪ್ರವೇಶವಿರುವ ಆರಾಧನಾ ಸ್ಥಳ, ಜಾನುವಾರುಗಳನ್ನು ಮೇಯಿಸಲು ಹಳ್ಳಿಯ ಸಾರ್ವತ್ರಿಕ ಗೋಮಾಳ, ಸಹಕಾರಿ ಹಾಲುಮನೆ, ಕೈಗಾರಿಕಾ ಶಿಕ್ಷಣ ಮುಖ್ಯ ಅಂಶವಾಗಿರುವ ಪ್ರಾಥಮಿಕ ಮತ್ತು ಸೆಕೆಂಡರಿ ಶಾಲೆಗಳು ಮತ್ತು ವ್ಯಾಜ್ಯಗಳನ್ನು ಬಗೆಹರಿಸಲು ಪಂಚಾಯಿತಿಗಳನ್ನು ಈ ಹಳ್ಳಿ ಹೊಂದಿರುವುವು. ಈ ಹಳ್ಳಿಯು ತನಗೆ ಅಗತ್ಯವಾಗಿರುವ ಧಾನ್ಯಗಳನ್ನು, ತರಕಾರಿಗಳನ್ನು ಮತ್ತು ಹಣ್ಣನ್ನು ಮತ್ತು ಅದು ತನಗೆ ಸ್ವತಹ ಬೇಕಾಗಿರುವಷ್ಟು ಖಾದಿಯನ್ನು ಉತ್ಪಾದಿಸುವುದು. ಇದು ಸ್ಥೂಲವಾಗಿ ನನ್ನ ಮಾದರಿ ಹಳ್ಳಿಯ ವಿಚಾರವಾಗಿದೆ.

ಸದ್ಯದ ಸನ್ನಿವೇಶಗಳಲ್ಲಿ ಅದರ ದರ ಕುಟಿರಗಳು ಸ್ವಲ್ಪಮಟ್ಟಿನ ಸುಧಾರಣೆಗಳನ್ನು ಅಳವಡಿಸಿಕೊಂಡು ಹಾಗೆಯೇ ಉಳಿದುಕೊಂಡಿರುವುವು. ಒಳ್ಳೆಯ ಜಮೀನ್ದಾರನಿದ್ದರೆ ಅಥವಾ ಜನರ ನಡುವೆ ಸಹಕಾರವಿದ್ದರೆ ಮಾದರಿ ಕುಟೀರಗಳನ್ನು ಬಿಟ್ಟಂತೆ ಬಹುತೇಕ ಇಡೀ ಕಾರ್ಯಕ್ರಮಗಳನ್ನು ಸರ್ಕಾರದ ನೆರವಿಲ್ಲದೇ ಜಮೀನ್ದಾರ ಅಥವಾ ಜಮೀನ್ದಾರರುಗಳನ್ನು ಒಳಗೊಂಡಂತೆ ಗ್ರಾಮವಾಸಿಗಳ ವರಮಾನದೊಳಗೆ ಕಾರ್ಯಗತಗೊಳಿಸಬಹುದು. ಈ ನೆರವಿನೊಡನೆ ಗ್ರಾಮದ ಪುನರ್ನಿರ್ಮಾಣದ ಸಾಧ್ಯತೆಗೆ ಮಿತಿಯೇ ಇರುವುದಿಲ್ಲ, ಆದರೆ ಇಲ್ಲಿ ನನ್ನ ಕಾರ್ಯವೆಂದರೆ ಗ್ರಾಮವಾಸಿಗಳಲ್ಲಿ ಸಹಕಾರವಿದ್ದರೆ ಮತ್ತು ಸರ್ವಸಾಮಾನ್ಯ ಒಳಿತಿಗಾಗಿ ತಾವಾಗಿ ಶ್ರಮದ ಕಾಣಿಕೆಯನ್ನು ನೀಡುವಂತಿದ್ದರೆ ಅವರು ತಾವೇ ಸ್ವತಹ ಸಹಾಯ ಪಡೆದುಕೊಂಡು ಏನು ಮಾಡಬಹುದು ಎಂಬುದನ್ನು ಕಂಡುಕೊಳ್ಳುವುದೇ ಆಗಿದೆ. ಅವರು ಬೌದ್ಧಿಕ ಮಾರ್ಗದರ್ಶನದಡಿಯಲ್ಲಿ ವೈಯಕ್ತಿಕ ಆದಾಯದಿಂದ ಪ್ರತ್ಯೇಕವಾಗಿ ಗ್ರಾಮದ ಆದಾಯವನ್ನು ಎರಡುಪಟ್ಟಿನಷ್ಟು ಹೆಚ್ಚಿಸಿಕೊಳ್ಳಬಹುದು ಎಂದು ನನಗೆ ಮನವರಿಕೆಯಾಗಿದೆ. ನಮ್ಮ ಹಳ್ಳಿಗಳಲ್ಲಿ ಖಾಲಿಮಾಡಲಾಗದಂತಹ ಸಂಪನ್ಮೂಲಗಳಿದ್ದು ಪ್ರತಿಯೊಂದು ಪ್ರಸಂಗದಲ್ಲೂ ಅವು ವಾಣಿಜ್ಯ ಉದ್ದೇಶಗಳಿಲ್ಲದೇ ಪ್ರತಿಯೊಂದು ಪ್ರಸಂಗದಲ್ಲೂ ಖಂಡಿತವಾಗಿಯೂ ಸ್ಥಳೀಯ ಉದ್ದೇಶಗಳಿಗೆ ಮೀಸಲಾಗಿವೆ. ಅತ್ಯಂತ ದೊಡ್ಡ ದುರಂತವೆಂದರೆ ತಮ್ಮ ಸ್ಥಿತಿಯನ್ನು ಉತ್ತಮಗೊಳಿಸಿಕೊಳ್ಳುವ ದಿಕ್ಕಿನಲ್ಲಿ ಗ್ರಾಮವಾಸಿಗಳಲ್ಲಿರುವ ನಿರಾಶಾದಾಯಕ ಒಲ್ಲದ ಮನಸ್ಸು,

ಗ್ರಾಮ ಕಾರ್ಯಕರ್ತನ ಮೊಟ್ಟ ಮೊಟ್ಟಮೊದಲ ಸಮಸ್ಯೆಯೆಂದರೆ ಅದರ ನೈರ್ಮಲ್ಯ ಸಮಸ್ಯೆಯನ್ನು ಪರಿಹರಿಸುವುದು. ಎಲ್ಲ ಸಮಸ್ಯೆಗಳಲ್ಲಿ ಈ ಸಮಸ್ಯೆ ತುಂಬಾ ನಿರ್ಲಕ್ಷ್ಯಕ್ಕೆ ಗುರಿಯಾಗಿದೆ. ಇದು ಆ ಕಾರ್ಯಕರ್ತನನ್ನು ದಿಗ್ಭ್ರಮೆಗೊಳಿಸುವುದು. ಇದು ದೈಹಿಕ ಸುಸ್ಥಿತಿಯನ್ನು ಹಾಳುಮಾಡುವುದು ಮತ್ತು ಕಾಯಿಲೆಯನ್ನು ಬೆಳೆಸುವುದು. ಕಾರ್ಯಕರ್ತನು ತಾನಾಗಿ ಭಂಗಿಯಾದರೆ ಅವನು ಮಲವನ್ನು

ಸಂಗ್ರಹಿಸಲಾರಂಭಿಸುವನು ಮತ್ತು ಅದನ್ನು ಗೊಬ್ಬರವಾಗಿ ಪರಿವರ್ತಿಸುವನು ಮತ್ತು ಹಳ್ಳಿಯ ಬೀದಿಗಳನ್ನು ಗುಡಿಸುವನು. ಅವನು ಜನರಿಗೆ ಎಲ್ಲಿ ಮತ್ತು ಹೇಗೆ ದಿನನಿತ್ಯದ ಕಾರ್ಯಗಳನ್ನು ನೆರವೇರಿಸಬೇಕೆಂಬುದರ ಬಗ್ಗೆ ಹೇಳುವನು ಮತ್ತು ನೈರ್ಮಲ್ಯದ ಬೆಲೆ ಮತ್ತು ಅದನ್ನು ನಿರ್ಲಕ್ಷಿಸುವುದರಿಂದ ಉಂಟಾಗುವ ಭಾರಿ ಹಾನಿಯ ಬಗ್ಗೆ ಮಾತಾಡುವನು. ಗ್ರಾಮವಾಸಿಗಳು ಅವನ ಮಾತನ್ನು ಕೇಳಿಸಿಕೊಳ್ಳಲಿ ಇಲ್ಲವೇ ಕೇಳಿಸಿಕೊಳ್ಳದಿರಲಿ ಅವನು ಅವನ ಕೆಲಸವನ್ನು ಮುಂದುವರಿಸುವನು.

**ಉಪಸಂಹಾರ**

2016ರಲ್ಲಿ ಸುಸ್ಥಿರ ಅಭಿವೃದ್ಧಿ ಗುರಿಗಳು ಸಹಸ್ರಮಾನದ ಅಭಿವೃದ್ಧಿಗುರಿಗಳನ್ನು ಬದಲಿಸಿದವು. ನೈರ್ಮಲ್ಯವು ಜಾಗತಿಕ ಅಭಿವೃದ್ಧಿಯ ಆದ್ಯತೆಯಾಗಿದೆ ಮತ್ತು ಸುಸ್ಥಿರ ಅಭಿವೃದ್ಧಿ ಗುರಿಯನ್ನು ಒಳಗೊಂಡಿದೆ. 2030ರ ವೇಳೆಗೆ **"ಎಲ್ಲರಿಗೂ ಶುದ್ಧ ನೀರು ಮತ್ತು ನೈರ್ಮಲ್ಯ"** ಗುರಿಯಾಗಿದೆ. ಕಾರಣ 2015ರ ಹೊತ್ತಿಗೆ 660 ಮಿಲಿಯನ್ ಜನರಿಗೆ ಇನ್ನೂ ಸುರಕ್ಷಿತ ಕುಡಿಯುವ ನೀರಿನ ಕೊರತೆ ಇದೆ ಎಂದು ಅಂದಾಜಿಸಲಾಗಿತ್ತು. 2020ರಲ್ಲಿ ಹರಡಿದ ಕೋವಿಡ್–19 ಸಾಂಕ್ರಾಮಿಕ ರೋಗದಿಂದ ಶುದ್ಧ ನೀರು ಮತ್ತು ನೈರ್ಮಲ್ಯಕ್ಕಾಗಿ ಹೋರಾಟ ಎಂದಿಗಿಂತಲೂ ಹೆಚ್ಚು ಮುಖ್ಯವಾಗಿದೆ. ಡಿಸೆಂಬರ್–2006ರಲ್ಲಿ ಯುನೈಟೆಡ್ ನೇಷನ್ಸ್ ಜನರಲ್ ಅಸೆಂಬ್ಲಿ 2008ನ್ನು "ಅಂತರಾಷ್ಟ್ರೀಯ ನೈರ್ಮಲ್ಯ ವರ್ಷ" ಎಂದು ಘೋಷಿಸಿತು. ಆದರೆ ಈ ವಿಚಾರದಲ್ಲಿ ಅಂತರ ಕಾಣಿಸುತ್ತಿದೆ. ಈ ಅಂತರಕ್ಕೆ ಪ್ರಮುಖ ಕಾರಣ ನೈರ್ಮಲ್ಯಕ್ಕೆ ಅದರ ಪ್ರಾಮುಖ್ಯತೆಯ ಹೊರತಾಗಿಯೂ ಇತರೆ ವಿಷಯಗಳಿಗಿಂತ ರಾಜಕೀಯ ವಿರಳವಾಗಿದೆ ಆದರೆ ನೈರ್ಮಲ್ಯ ಕ್ಷೇತ್ರದಲ್ಲಿ ಪ್ರಗತಿ ಸಾಧಿಸಲು ಸಾಮರ್ಥ್ಯದ ಅಭಿವೃದ್ಧಿಯನ್ನು ಪ್ರಮುಖ ಕಾರ್ಯ ವಿಧಾನವೆಂದು ಪರಿಗಣಿಸಲಾಗಿದೆ.